ಬಂದಿತ್ತು. ಈಗ ಮತ್ತೆ ಜಯಲಲಿತಾ ಜೀವನಚರಿತ್ರೆಯ ಪುಟಗಳು ನಮ್ಮನ್ನು ಆವರಿಸಿಕೊಳ್ಳಲಿವೆ ಎಂದು ಯೋಚಿಸುತ್ತಾ ಬೇಜಾರುಮಾಡಿಕೊಂಡೆ. ನಮ್ಮ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬರೆಯಬೇಕಾದದ್ದು ನಣ್ಣರಂತಹವರ ಚರಿತ್ರೆಯನ್ನು! ಜಯಲಲಿತಾಳ ಜೀವನಚರಿತ್ರೆಗಿಂತಲೂ ಅದು ಆಸಕ್ತಿಕರವಾಗಿರಬಹುದು. ಆಸಕ್ತಿ ಹುಟ್ಟಿಸುವಂತಿದ್ದರೆ ಜನ ಬೇಡ ಎಂದು ಹೇಳಲಾರರು.

ನಾನು ಈ ರೀತಿ ಯೋಚಿಸುತ್ತಿದ್ದವನು ಸಹಜವಾಗಿ ಎಂಬಂತೆ, “ನಣ್ಣರು ಹೋಟೆಲ್ ಬಿಟ್ಟದ್ದು ಯಾಕೆ?” ಎಂದು ಕೇಳಿದಾಗ ಕಾಮತರಿಗೆ ತುಂಬಾ ಅವಮಾನ ಆದಂತಾಯಿತು, ಬಹುಶಃ ಅವರ ಮಾತಿಗೆ ಯಾವ ಸಂಬಂಧವೂ ಇಲ್ಲದ ಈ ಪ್ರಶ್ನೆ ಕೇಳಿದ್ದರಿಂದ ನನ್ನನ್ನೂ ನಣ್ಣರ ಸಾಲಿಗೆ ಸೇರಿಸಿದರೋ ಏನೋ! ನನ್ನ ಮನಸ್ಸಿನೊಳಗೆ ನಡೆದ ಚಿಂತನ ಮಂಥನದ ಅರಿವು ಅವರಿಗೆ ಹೇಗಾಗಬೇಕು, ಪಾಪ! ನಾನು ಹಾಗೆ ಕೇಳಬಾರದಾಗಿತ್ತು. ಕಾಮತರು ನನ್ನನ್ನು ಸ್ವಲ್ಪ ಸಿಟ್ಟು, ಸ್ವಲ್ಪ ಅಸಹನೆ, ಸ್ವಲ್ಪ ಅನುಕಂಪ ಎಲ್ಲ ಬೆರೆತ ಒಂದು ಅಸಹ್ಯ ನೋಟದಲ್ಲಿ ನೋಡಿ, ಪಾಥೇಯ ಹಿಡಿದವರಂತೆ ದಡಕ್ಕೆಂದು ಎದ್ದು,

“ಅದು ನನಗೆಂಥದು ಗೊತ್ತುಂಟು?” ಎಂದು ಖಡಕ್ಕಾಗಿ ಹೇಳಿ ಆಚೆಹೋದರು. ನನಗೂ ಸಿಟ್ಟುಬಂದು, ‘ಜಯಲಲಿತಾ, ಶಶಿಕಲಾರ ಬಗ್ಗೆ ನಿಮಗೆ ಹೇಗೆ ಗೊತ್ತಾಯಿತು?’ ಎಂದು ಕೇಳಬೇಕೆಂದುಕೊಂಡೆ. ಆದರೆ ಕೇಳಲಿಲ್ಲ. ಪತ್ರಿಕೆಗಳು, ಟೀವಿಗಳು ಬೇಕಾದಷ್ಟು ಇರುವುದರಿಂದ ಹಾಗೆ ಕೇಳುವುದು ಮತ್ತೊಂದು ಮೂರ್ಖತನವಾದೀತು!

ನಣ್ಣರ ಜೀವನದ ಕತೆಯನ್ನು ತಿಳಿಯಬೇಕೆಂಬ ನನ್ನ ಉತ್ಸಾಹವನ್ನು ತಣಿಸುವ ಯಾವ ಸಂಗತಿಯೂ ಅವರ ಅಂಗಡಿಯಲ್ಲಿ ನಡೆಯುತ್ತಿರಲಿಲ್ಲ. ದಿನಕ್ಕೊಮ್ಮೆ ನಾನು ಅಲ್ಲಿಗೆ ಹೋಗುವುದನ್ನು ತಪ್ಪಿಸುತ್ತಿರಲಿಲ್ಲ. ಉಲ್ಲೇಖಿಸಲು ಯೋಗ್ಯವಾದ ಒಂದೊಂದು ಸಂಗತಿಗಳು ಅಲ್ಲಿ ನಡೆದಾಗಲೂ ನಣ್ಣರು ಇನ್ನಷ್ಟು ರಹಸ್ಯಾತ್ಮಕ ವ್ಯಕ್ತಿಯಾಗುತ್ತಿದ್ದರೇ ಹೊರತು ಹೆಚ್ಚು ಅರ್ಥವಾಗಲಿಲ್ಲ.

ಅಂಗಡಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಹಳ್ಳಿಯ ಗಿರಾಕಿಗಳು ತಾಳ್ಮೆಯಿಂದ ಅವರು ಸಾಮಾನು ತೂಕ ಮಾಡಿ ಕಟ್ಟಿಕೊಡುವುದನ್ನೇ ಕಾದುಕೊಂಡಿರುತ್ತಿದ್ದರು. ಆದರೆ ನಣ್ಣರ ವಟವಟ ಮಾತುಗಳಿಗೆ, ಅವರ ಹಾಡುಗಳಿಗೆ, ಅವರ ನಗುವಿಗೆ ಒಂದು ನಯಾಪೈಸೆ ಬೆಲೆ ಕೊಡುತ್ತಿರಲಿಲ್ಲ ಆ ಜನ. ಎಲ್ಲರೂ ನಣ್ಣರ ಅಂಗಡಿಯ ಸಾಮಾನು ಸರಂಜಾಮುಗಳನ್ನು ದೋಚಿಕೊಂಡುಹೋಗಲು ಬರುವ ಕಳ್ಳಕಾಕರಂತೆ ಕಾಣುತ್ತಿದ್ದರು ನನಗೆ.

ಹಾಗಾಗಿ ನಣ್ಣರ ಬಗ್ಗೆ ಯಾರನ್ನು ಕೇಳುವುದೆಂದೇ ಹೊಳೆಯಲಿಲ್ಲ. ಅಲ್ಲದೆ ಆ ಅಸ್ವಸ್ಥ ಜನರ ಕೂಟದಲ್ಲಿ ಸ್ವಸ್ಥವಾಗಿ ಇರುವವರು ನಣ್ಣರೊಬ್ಬರೇ ಅಂತಲೂ ಅನಿಸುತ್ತಿತ್ತು. ಹಾಗಾಗಿ ಕೇಳುವುದಾದರೂ ಏನನ್ನು?

ಅವರ ಪತ್ನಿಯನ್ನು, ‘ನಣ್ಣರು ಹೋಟೆಲ್ ಮುಚ್ಚಿ ತಮಗೆ ಹಿಡಿಸದ ಈ ವ್ಯಾಪಾರವನ್ನು ಶುರು ಮಾಡಿದುದು ಯಾಕೆ?’ ಎಂಬ ಪ್ರಶ್ನೆಯನ್ನು ಕೇಳಬೇಕೆಂದು ಬಹುದಿನಗಳಿಂದ ಅಂದುಕೊಳ್ಳುತ್ತಾ ಇದ್ದೆ. ಆದರೆ ಅವರು ಒಂದು ಕೂಡಾ ಮಾತನಾಡದೆ ಕುರ್ಚಿಯಲ್ಲಿ ಬಿಗುಮುಖದಿಂದ ಕುಳಿತೇ ಇರುತ್ತಿದ್ದರು. ಒಮ್ಮೆಯೂ ನನ್ನ ದೃಷ್ಟಿಯ ಜತೆಗೆ ತಮ್ಮ ದೃಷ್ಟಿಯನ್ನು ಕೂಡಿಸಿದ್ದಿಲ್ಲ ಆ ವೃದ್ಧೆ. ನಿಜವಾಗಿ ನೋಡಿದರೆ ಜೀವನೋತ್ಸಾಹದಿಂದ ತುಂಬಿ ತುಳುಕುತ್ತಿದ್ದ ನಣ್ಣರ ಬಳಿ, ‘ನಿಮ್ಮ ಹೆಂಡತಿ ಯಾಕೆ ಅಷ್ಟು ಬೇಜಾರಿನಿಂದ ಕುಳಿತಿರುತ್ತಾರೆ?’ ಎಂದು ಕೇಳಬೇಕೆಂಬ ಆಸೆಯೂ ನನಗೆ ಆಗಿದ್ದುದುಂಟು.